(ಕರ್ನಾಟಕ ಸರ್ಕಾರ
ಕಂದಾಯ ಇಲಾಖೆ)

# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮಂಡ್ಯ ಜಿಲ್ಲೆ, ಮಂಡ್ಯ

Phone no: 08232 224600
& Fax no:-08232-221417
E-mail:-dcmandya09@gmail.com

ಸಂ: ಸಿಬ್ಬಂದಿ (1)248/2016–17 ದಿನಾಂಕ: 18/11/2017

## -:ಅಧಿಕೃತ ಜ್ಞಾಪನ:-

**ವಿಷಯ:–** ಮಂಡ್ಯ ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿ ಇರುವ 100 ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಂಬಂಧದಲ್ಲಿ 1:5ರ ಅನುಪಾತದಲ್ಲಿ ತಾತ್ಕಾಲಿಕ ಪರಿಷ್ಕೃತ ಪಟ್ಟಿಯನ್ನು ಪ್ರಕಟಿಸುವ ಕುರಿತು.

**ಉಲ್ಲೇಖ:–** ಈ ಕಛೇರಿಯ ಇದೇ ಕ್ರಮಾಂಕದ ಅಧಿಕೃತ ಜ್ಞಾಪನ ಸಂಖ್ಯೆ ಹಾಗೂ ದಿನಾಂಕ:16.09.2017.

@@@@@@

ಮಂಡ್ಯ ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿ ಇರುವ 100 ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಂಬಂಧದಲ್ಲಿ 1:5ರ ಅನುಪಾತದ ತಾತ್ಕಾಲಿಕ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಉಲ್ಲೇಖದಂತೆ ಪ್ರಕಟಿಸಲಾಗಿತ್ತು.

ಅಂಗವಿಕಲ ಮೀಸಲಾತಿಯಡಿ ನೇಮಕಾತಿ ಕೋರಿರುವ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ನೀಡಲಾಗಿದ್ದು, ಇದರಿಂದ ಅಭ್ಯರ್ಥಿಗಳ ರಸೀತಿಯು ಅಂಚೆ ಕಛೇರಿಯಲ್ಲಿ ಅಪ್ ಲೋಡ್ ಆಗದೆ ಇದ್ದದರಿಂದ ಕಡಿಮೆ ಅಂಕ ಪಡೆದಿರುವ ಅಭ್ಯರ್ಥಿಗಳು ಉಲ್ಲೇಖಿತ ತಾತ್ಕಾಲಿಕ ಪಟ್ಟಿಯಲ್ಲಿ ಸೇರಿದ್ದು, ಹೆಚ್ಚಿನ ಅಂಕಗಳನ್ನು ಪಡೆದಿರುವ ಅಭ್ಯರ್ಥಿಗಳು ಬಿಟ್ಟು ಹೋಗಿರುತ್ತಾರೆ.

ಹೆಚ್ಚಿನ ಅಂಕ ಪಡೆದ ಅಂಗವಿಕಲ ಅಭ್ಯರ್ಥಿಗಳು ದಿನಾಂಕ:16.09.2017ರಂದು ಪ್ರಕಟಿಸಿದ ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. ಸದರಿ ಅಭ್ಯರ್ಥಿಗಳ ಆಕ್ಷೇಪಣೆಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದಿರುವ ಅಂಗವಿಕಲ ಅಭ್ಯರ್ಥಿಗಳು ಪಟ್ಟಿಯಲ್ಲಿ ಬಿಟ್ಟು ಹೋಗಿದ್ದ ಹಿನ್ನೆಲೆಯಲ್ಲಿ ಅಂಗವಿಕಲ ಮೀಸಲಾತಿಯಡಿ ಅರ್ಜಿ ಸಲ್ಲಿಸಿದ ಎಲ್ಲಾ ಅಭ್ಯರ್ಥಿಗಳ ಪಟ್ಟಿಯನ್ನು ಪಡೆದು ಪರಿಶೀಲಿಸಿದೆ ಹಾಗೂ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ, ಪರಿಷ್ಕೃತ 1:5ರ ಅನುಪಾತದ ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸಿದೆ. ಸದರಿ ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಭಾದಿತರಾದ ಅಭ್ಯರ್ಥಿಗಳು ಈ ಪಟ್ಟಿಯು ಪ್ರಕಟಗೊಂಡ 7ದಿನಗಳೊಳಗಾಗಿ ಪೂರಕ ದಾಖಲಾತಿಗಳೊಂದಿಗೆ ಅಧ್ಯಕ್ಷರು, ಗ್ರಾಮಲೆಕ್ಕಿಗರ ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ , ಮಂಡ್ಯ ರವರಿಗೆ ಸಲ್ಲಿಸಲು ಸೂಚಿಸಿದೆ. ನಂತರ ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

**ಷರತ್ತುಗಳು:–**

1. . ಅಭ್ಯರ್ಥಿಗಳು, ಮೆರಿಟ್ ಹಾಗೂ ಮೀಸಲಾತಿಯನ್ವಯ ಒಂದಕ್ಕಿಂತ ಹೆಚ್ಚು ಕಡೆ ಆಯ್ಕೆಗೊಂಡಿದ್ದಲ್ಲಿ, ಅಂತಹ ಅಭ್ಯರ್ಥಿಗಳನ್ನು ಮೆರಿಟ್ ಆಧರಿಸಿ ನಿಯಮಾನುಸಾರ ಮೊದಲಿಗೆ ಸಾಮಾನ್ಯ ಅಭ್ಯರ್ಥಿಯಾಗಿ

–2)

ಪರಿಗಣಿಸಲಾಗುವುದು, ಮೊದಲ ಆಯ್ಕೆ ನಂತರ ಸದರಿ ಅಭ್ಯರ್ಥಿಗಳನ್ನು ಉಳಿದ ಮೀಸಲಾತಿ ಆಯ್ಕೆ ಪಟ್ಟಿಗಳಿಂದ ಕೈ ಬಿಡಲಾಗುವುದು. ಉಳಿದಂತೆ ನಂತರ ಅಭ್ಯರ್ಥಿಗಳನ್ನು ಮೆರಿಟ್ ಅನ್ವಯ ಅವರು ಕೋರಿರುವ ಮೀಸಲಾತಿಯಡಿ ಪರಿಗಣಿಸಲಾಗುವುದು.

2. 1:5ರ ಅನುಪಾತದಲ್ಲಿನ ಅಭ್ಯರ್ಥಿಗಳ ದಾಖಲಾತಿಯ ಪರಿಶೀಲನೆಯ ನಂತರ ನಿಗಧಿಪಡಿಸಿರುವ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳಲಾಗುವುದು ಹಾಗೂ ಇನ್ನೂ ಶೇಕಡ 30ರಷ್ಟು ಹೆಚ್ಚುವರಿ ಅರ್ಹ ಅಭ್ಯರ್ಥಿಗಳನ್ನು ಪ್ರತ್ಯೇಕವಾಗಿ ಕಾಯ್ದಿರಿಸಿದ ಪಟ್ಟಿಯಲ್ಲಿ ಸೇರಿಸಿಕೊಳ್ಳಲಾಗುವುದು (Reserve list). ಒಂದು ವೇಳೆ ನೇಮಕಗೊಂಡ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ಅಂತಹ ಹುದ್ದೆಗಳನ್ನು ಶೇಕಡ 30ರಷ್ಟು ಕಾಯ್ದಿರಿಸಿಕೊಂಡಿರುವ ಪಟ್ಟಿ /ಅಭ್ಯರ್ಥಿಗಳಲ್ಲಿ ಮೆರಿಟ್ ಆಧಾರದಲ್ಲಿ ನಿಯಮಾನುಸಾರ ಆಯ್ಕೆ ಮಾಡಿಕೊಳ್ಳಲಾಗುವುದು.

Manjunatha

ಅಧ್ಯಕ್ಷರು,
ಗ್ರಾಮಲೆಕ್ಕಿಗರು ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ
ಹಾಗೂ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ.

ಪ್ರತಿಯನ್ನು :- ಜಿಲ್ಲಾ ವಿಜ್ಞಾನ ಸೂಚಾನಾಧಿಕಾರಿ, ಮಂಡ್ಯ ರವರಿಗೆ, 1:5ರ ಅನುಪಾತ ತಾತ್ಕಾಲಿಕ ಪಟ್ಟಿಯನ್ನು ಇದರೊಂದಿಗೆ ಕಳುಹಿಸುತ್ತಾ, ವೆಬ್‌ಸೈಟ್ ನಲ್ಲಿ ಪ್ರಕಟಿಸುವ ಬಗ್ಗೆ ಕ್ರಮವಹಿಸಲು ಕೋರಿದೆ.